ಕನ್ನಡ ಸಂಘ, ಟೋರೋಂಟೊ ಹೊಸ  ಕಾರ್ಯಕಾರೀ ಸಮಿತಿಯ ಮೊದಲ  ಕಾರ್ಯಕ್ರಮ:  ಆಗಷ್ಟ್  ೫, ೨೦೧೧. ಕವಿಗೋಷ್ಠಿ ಮತ್ತು ಉಪನ್ಯಾಸ, ಡಾ.ಬಿ.ಎ.ಸನದಿ, ಹಿರಿಯ ಕವಿಗಳು, ಕುಮಟಾ( ಉ.ಕ.)

ಇನ್ನೇನು, ಕೆಲವೇ ದಿನಗಳಲ್ಲಿ ಈ ವರ್ಷದ  ಈ ತಿಂಗಳ  ೧೫ನೆಯ ತಾರೀಕು ಬಂದೇ ಬರುತ್ತದೆ. ನಮ್ಮ ದೇಶದಲ್ಲಾಗಲೀ, ಹೊರದೇಶಗಳಲ್ಲಿ  ಹೋಗಿ ನೆಲೆಸಿದ ಭಾರತೀಯ ಸಮುದಾಯಗಳಲ್ಲಾಗಲೀ, ಸಾರ್ವಜನಿಕ ಸ್ಥಳಗಳಲ್ಲಿ ನಮ್ಮ ರಾಷ್ಟ್ರಧ್ವಜ  ಹಾರಿಸಿ ,ನೆರೆದ ಜನಸಮುದಾಯದ ದನಿ ಏರಿಸಿ ' ಭಾರತ ಮಾತಾಕೀ ಜೈ' ಎಂದು ಘೋಷಣೆ ಮಾಡುವುದು ರೂಢಿಯಾಗಿ  ಬಿಟ್ಟಿದೆ. ಆ ದಿನ ಬಲು ಉತ್ಸಾಹದಿಂದ ಸಭೆ-ಸಮಾರಂಭಗಳನ್ನು ಸಂಘಟಿಸಿ, ನಮ್ಮ ದೇಶದ ಹಿಂದಿನ  ಸ್ಥಿತಿ-ಗತಿಗಳನ್ನು ನೆನೆದುಕೊಂಡು, ನಮ್ಮ ದೇಶದ ಸ್ವಾತಂತ್ರ್ಯ ಸಂಪಾದನೆಗಾಗಿ ದುಡಿದು ಮಡಿದವರ, ತ್ಯಾಗ-ಬಲಿದಾನ ನೀಡಿದವರ ಗುಣಗಾನ ಮಾಡಿ, ಇಂದಿನ ರಾಜಕೀಯದ ಗೌಜಿ-ಗೊಂದಲಗಳ ಬಗ್ಗೆ ಬೇಸರದ ದನಿಯೆತ್ತುತ್ತೇವೆ. ಇಂದು ಭಾರತದ ಯಾವ ಮೂಲೆಯಲ್ಲಿ ನಿಂತು ನೋಡಿದರೂ , ಸ್ವಾತಂತ್ರ್ಯದ ಸವಿಫಲ ಉಂಡು ಸುಖವಾಗಿದ್ದೇವೆ ಎಂದು  ಹೇಳುವ ಒಂದು ನರಜೀವಿಯೂ ಸಿಗಲಿಕ್ಕಿಲ್ಲ. ಹಿಂದಿನ ಹಿರಿಯರ ಕನಸುಗಳೆಲ್ಲ ಒಡೆದು ಚಲ್ಲಾಪಿಲ್ಲಿಯಾದಂತೆ ಭಾಸವಾಗುತ್ತಿದೆ. ಇಂದಿನ ಸಾಮಾನ್ಯ ಪ್ರಜೆಗಳಲ್ಲೂ ಸಂತೃಪ್ತಿಯ ಸೊಲ್ಲಿಲ್ಲ,  ಪ್ರಜಾಪ್ರತಿನಿಧಿಗಳಲ್ಲೂ ಸಮಾಧಾನವಿಲ್ಲ. ನಮ್ಮ ಹೃದಯದ ಹೊಲದೊಳಗೆಲ್ಲ  ಕಳೆ-ಕಸರು ತುಂಬಿ ಬಂದ ಬೆಳೆಯನ್ನೆಲ್ಲ ನುಂಗಿ ಹಾಕುತ್ತಿರುವಂತೆ ಭಾಸವಾಗುತ್ತಿದೆ. ಅಂತೆಯೆ, ನಮ್ಮ ವರಕವಿ ದ.ರಾ.ಬೇಂದ್ರೆಯವರು ಹಾಡಿ ಹೋದಂತೆ--

"ಬೆದೆಯರಿತು ಹದ ಮಾಡು ಹೃದಯದೀ ಹೊಲವನ್ನು
ಹದಬೆದೆಯನರಿತಂಥ ಹೃದಯವಾಸೀ !
ಗರುವ-ಗರಿಕೆಗಳೆಂಬ ಹುಲ್ಲು ಕರಿಕೆಗಳಿಂದ
ಸರುವವೂ ಕೆಟ್ಟಿಹುದು ನಟ್ಟು ಬೆಳೆದು//ಬೆದೆಯರಿತು ಹದ ಮಾಡು .........

ಎಂದು ನಮ್ಮ ನಮ್ಮ ಹೃದಯಮಂದಿರಗಳಲ್ಲಿ ಆಸೀನನಾಗಿರುವ ಪರಮಾತ್ಮನಲ್ಲಿ ಪ್ರಾರ್ಥನೆ  ಸಲ್ಲಿಸುವ ಕಾಲ ಬಂದಿದೆ. ಆದರೆ, ಇದು ಮುಖ್ಯವಾಗಿ ನಮ್ಮ ಆತ್ಮಶೋಧನೆಯ ಕಾಲ. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲೆಕ್ಕವಿಲ್ಲದಷ್ಟು ತ್ಯಾಗ-ಬಲಿದಾನಗಳನ್ನು ನೀಡಿ, ನಮಗೆ ನವರಾಷ್ಟ್ರನಿರ್ಮಾಣದ ದಾರಿ ತೋರಿಸಿ ಹೋದವರನ್ನು ಸ್ಮರಿಸುತ್ತ, "ಸರ್ವಜನ ಹಿತಾಯ ಸರ್ವಜನ ಸುಖಾಯ' ಮುನ್ನಡೆ ಸಾಧಿಸುವ ಕಾಲ. ಅವಿರತ ಜಾಗೃತಿಯೇ ಪ್ರಗತಿಯ ಮೂಲವೆಂಬುದನ್ನು ಸದಾ ನೆನಪಿಟ್ಟುಕೊಂಡು '" ಅಪನಾ ಭಾರತ ಮಹಾನ್"ಎಂಬುದನ್ನು ನಾವಿಂದು ವಿಶ್ವಕ್ಕೆ ಸಿದ್ಧ ಪಡಿಸಿ ತೋರಿಸಬೇಕಾದ ಕಾಲ. ಕೇವಲ ಜನಸಂಖ್ಯೆಯಲ್ಲಿ "ಮಹಾನ್" ಅಲ್ಲ, ಜನರ ಮನೋಬಲದಲ್ಲೂ ಮಹಾನ್, ಆವರ ಸಾಧನೆ-ಸಿದ್ಧಿಗಳಲ್ಲೂ ಮಹಾನ್ ಎಂದು ಜಗತ್ತಿಗೆ ಮನಗಾಣಿಸಿ ಕೊಡುವ ಕಾಲ.

*   *   *

ನಮ್ಮ ದೇಶದ ಸ್ವಾತಂತ್ರ್ಯ ಸಂಪಾದನೆಗಾಗಿ ಅಸಂಖ್ಯ ನೇತಾರರು ನೇರವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ  ಧುಮುಕಿ ತಮ್ಮ ಜೀವಬಲಿದಾನ ನಿಡಿದ ನೂರೊಂದು ಉದಾಹರಣೆಗಳಿವೆ. ಯಾವುದೇ ಆಂದೋಳನಕ್ಕೆ ಕೇವಲ ನೇತಾರರಿದ್ದರೆ ಸಾಲದು. ಆ ಆಂದೋಳನಕ್ಕೆ ರಾಷ್ಟ್ರೀಯ ಅಥವಾ ಸಾಮಾಜಿಕ ಸ್ವರೂಪ ಬರಬೇಕಾದರೆ, ಮುಂದಾಳುಗಳ ಜೊತೆಗೆ ಅಸಂಖ್ಯ ಅನುಯಾಯಿಗಳು ಕೈಗೂಡಿಸಬೇಕಾಗುತ್ತದೆ. ಹೆಜ್ಜೆಯಲ್ಲಿ ಹೆಜ್ಜೆ ಹಾಕಬೇಕಾಗುತ್ತದೆ.  ಆಂದೋಳನದ ಉದ್ದೇಶಸಾಧನೆಗಾಗಿ ಹಗಲಿರುಳೂ ಚಿಂತನೆ ಮಾಡಬೇಕಾಗುತ್ತದೆ. ಅದಕ್ಕಾಗಿ ಅಗತ್ಯವಿರುವ ಮನೋಭೂಮಿಕೆಯನ್ನು ತಯಾರಿಸುವ ಕಾರ್ಯವನ್ನು ಕವಿ-ಕಲಾವಿದರು ಮಾಡುತ್ತಾರೆ; ಮಾಡಬೇಕು. ಅದು ಅವರು ಸಲ್ಲಿಸಬೇಕಾದ ಸಾಮಾಜಿಕ ಋಣ.

ಒಂದು ದೃಷ್ಟಿಯಿಂದ  ಸಮಾಜದ ಮುಖವಾಣಿಯಾಗಿ , ಸಮಾಜದ ವಿವಿಧ ಸ್ತರಗಳ ಆಸ-ಆಕಾಂಕ್ಷೆಗಳಿಗೆ ದನಿಗೊಡುವ ಕವಿ-ಕಲಾವಿದರು ಅಂದಂದಿನ ಪರಿವರ್ತನೆಯ ಚಳುವಳಿಗಳಿಗೆ ಬಲದುಂಬುವ ಕೆಲಸವನ್ನು ನಿಷ್ಠೆಯಿಂದಲೇ ಮಾಡುತ್ತಾರೆ. ಅಂತೆಯೇ, ಆಯಾ ಚಳುವಳಿಗಳ ನೇತೃತ್ವ ವಹಿಸುವ ಮುಂದಾಳುಗಳಿಗಿಂತ ಕವಿ-ಕಲಾವಿದರ ಸೇವೆ ಸಣ್ಣದೇನಲ್ಲ. ಒಂದು ಇನ್ನೊಂದಕ್ಕೆ ಪೂರಕವಾದದ್ದೇ ನಮ್ಮ ಸ್ವಾತಂತ್ರ್ಯ ಸಂಗ್ರಾಮದ ವೈಶಿಷ್ಟ್ಯ. ಪ್ರಸ್ತುತ ಭಾರತ ಸ್ವಾತಂತ್ರ್ಯ ಸಂಗ್ರಾಮದ ವಿಷಯವನ್ನು ಕುರಿತು ಮೆಲುಕು  ಹಾಕುವಾಗ ಬಿಟ್ಟೂ ಬಿಡದೆ ಮಹತ್ಮಾ ಗಾಂಧೀಜಿಯವರನ್ನು ನೆನೆದೇ ನೆನೆಯುತ್ತೇವೆ. ಆದರೆ ಗಾಂಧೀಜಿಯವರಿಂದ "ಗುರುದೇವ" ಎನಿಸಿಕೊಂಡಿದ್ದ ಮಹಾಕವಿ ರವೀಂದ್ರನಾಥ್ ಠಾಕೂರ್ ಅವರನ್ನು ಮರೆಯಲುಂಟೇ? ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಬೀಸಿದ ರಾಷ್ಟ್ರೀಯತೆಯ ಬಿಸಿಗಾಳಿಗೆ ತಾತ್ವಿಕ  ದಿಕ್ಕು ತೋರಿಸಿದ ಸ್ವಾಮಿ ದಯಾನಂದ ಸರಸ್ವತಿ ಹಾಗೂ ಮಹರ್ಷಿ ಅರವಿಂದರಂಥವರನ್ನು ಮರೆಯಬಹುದೇ?

ಇಡಿಯ ದೇಶದ  ಒಡಲಾಳದಲ್ಲಿ ಕುದಿದೆದ್ದ ಬಿಡುಗಡೆಯ ಬಯಕೆಗೆ ಜನವಾಣಿಯ ರಂಗೇರಿಸಿದ ಸುಬ್ರಹ್ಮಣ್ಯ ಭಾರತಿ,, ಬಂಕಿಮ್ ಚಂದ್ರ ಚಟರ್ಜೀ, ಮೊಹಮ್ಮದ್ ಇಕ್ಬಾಲ್, ನಜ್ರುಲ್ ಇಸ್ಲಾಮ್, ವೀರ ಸಾವರ್ಕರ್, ಇವರನ್ನೆಲ್ಲ ನೆನೆಯದಿದ್ದರೆ ನಾವು  ನಮ್ಮ ಕರ್ತವ್ಯದಲ್ಲಿ   ಚುತಿಗೈದಂತಾಗಬಹುದು. ರಾಷ್ಟ್ರೀಯ ಸ್ತರದ ಈ ಕೆಲವು ಕವಿಗಳ ಹಾಗೆ, ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾಣಿಕೆ ನೀಡಿದ ಕನ್ನಡ   ಕವಿಗಳೂ ಸಾಕಷ್ಟು ಜನರಿದ್ದಾರೆ. ಅವರಲ್ಲಿ ಅನೇಕರು  ಈಗ ಇಲ್ಲ.ದೇಶದ  ಬಿಡುಗಡೆಯ  ಹೋರಾಟಕ್ಕೆ ಪೂರಕ ಶಕ್ತಿಯನ್ನು ಒದಗಿಸಿದ  ಅನೇಕ ಕವಿ-ಕಲಾವಿದರು "ತಮ್ಮ ಮಣಿಹ ಸಂದಿತು" ಎಂದು  ಯಾರೂ ಕಾಣದೂರಿಗೆ ಹೋಗಿ ಬಿಟ್ಟಿದ್ದಾರೆ. ಅವರೆಂದೂ ತಮಗೊಂದು ಸರಕಾರೀ ಬಂಗಲೆ  ಬೇಕೆಂದು  ಬೇಡಲಿಲ್ಲ. ಸಚಿವಸ್ಥಾನ ಬೇಕೆಂದು ಯಾರನ್ನೂ ಕಾಡಲಿಲ್ಲ. ದೇಶಕ್ಕಾಗಿ ಮಾಡಬೇಕಾದುದನ್ನು ಮಾಡಿದರು, ತಮ್ಮ ಅಕ್ಷರಮಾಲೆಗಳನ್ನು ಮಕ್ಕಳ ಮತ್ತು ಮೊಮ್ಮಕ್ಕಳ ಕೊರಳಿಗೆ ತೊಡಿಸಿ ಹೊರಟು ಹೋದರು.ನಮ್ಮ ದೇಶದ ಮಹಾ ಮುಂದಾಳುಗಳೂ,ಸ್ವಾತಂತ್ರ್ಯಯೋಧರೂ ಕವಿ-ಕಲಾವಿದರೂ ತಮ್ಮ ಶಕ್ತಿ-ಸಾಮರ್ಥ್ಯಗಳನ್ನೆಲ್ಲ ಒಗ್ಗೂಡಿಸಿ ನಮಗೆ ದೊರಕಿಸಿ ಕೊಟ್ಟ ಸ್ವಾತಂತ್ರ್ಯದ ಸಿಹಿ-ಕಹಿ ಫಲಗಳನ್ನು ಸವಿಯಲು ಇಂದು ನಡೆದ ರಾಜಕೀಯ ಪೈಪೋಟಿಯನ್ನು ನೋಡುವ ಸೌಭಾಗ್ಯ ನಮ್ಮದಾಗಿದೆ. ಇಂದು ಗಾಂಧೀಜಿ ಬದುಕಿದ್ದರೆ ಅವರ ಗತಿ ಏನಾಗುತ್ತಿತ್ತೋ!

ಯಾವುದೇ ದೇಶವಾಗಲಿ, ರಾಜಕೀಯ ಪುಢಾರಿಗಳು ರಾಜಕೀಯ ಅಧಿಕಾರಕ್ಕಾಗಿ ಸ್ವಾತಂತ್ರ್ಯ  ಬೇಕೆಂದು ಹಾಡಿ ಹಂಬಲಿಸಿದರೆ, ಮಾನವತಾಪರ. ಚಿಂತಕರು ಮನುಷ್ಯನ  ಸಮಗ್ರ ವ್ಯಕ್ತಿತ್ವ ವಿಕಾಸಕ್ಕಾಗಿ ಸ್ವತಂತ್ರ ವಾತಾವರಣವಿರಬೇಕೆಂದು ಹಾರೈಸುತ್ತಾರೆ. ಉದಾಹರಣೆಗೆ: ನಮ್ಮ ದೇಶದ ಮೇಲೆ ಬ್ರಿಟಿಷರ ಕೆಂಗಣ್ಣು ಬೀಳುವ ಮೊದಲೇ ಬಾಳಿ ಬೆಳಗಿ ಹೋದ 'ಎಲ್ಲರೊಳೊಂದೊಂದು ನುಡಿಗಲಿತು ವಿದ್ಯೆಯ ಪರ್ವತವೆ ತಾನಾದ' ಸಂಚಾರಿ ಕವಿ ಸರ್ವಜ್ಞ ಹೇಳಿದ ಮಾತು  ಇಂದಿಗೂ, ಎಂದಿಗೂ ಅನ್ವಯಿಸುವ ಹಾಗಿರುವುದನ್ನು ನಾವು ಗಮನಿಸಬಹುದು:

"ತಂತ್ರಿವಾದ್ಯವು ಲೇಸು/ಮಂತ್ರಿಪದವಿಯು ಲೇಸು/
ಯಂತ್ರವಾಹಕನ ಕೆಳೆ ಲೇಸು/ಜಗದಿ  ಸ್ವಾ-
ತಂತ್ರ್ಯವೇ ಲೇಸು ಸರ್ವಜ್ಞ//

ಈ ಪದ್ಯವನ್ನು ಗಮನಿಸಿದರೆ, ಎಲ್ಲಿಯ ಬ್ರಿಟಿಷ್ ಸಾಮ್ರಾಜ್ಯವಿಸ್ತರಣೆ, ಎಲ್ಲಿಯ ಸರ್ವಜ್ಞನ ಸ್ವಾತಂತ್ರ್ಯದ ಕಲ್ಪನೆ-ಎಂದೆನಿಸುತ್ತದೆ. ಮಾನವನ ಭೂತ-ಭವಿಷ್ಯಗಳನ್ನು ಕುರಿತು ಧೇನಿಸುವ ಸಂವೇದನಾಶೀಲ ಕವಿ ತನ್ನ ಸ್ವತಂತ್ರ ಸಮಕಾಲೀನ  ಆಲೋಚನೆಗಳನ್ನು ಸಾರ್ವಕಾಲಿಕವಾಗುವಂತೆ ಹಾಡಿ ಬಿಡುತ್ತಾನೆ. ಇಂಥ ಮಾತುಗಳು ದೇಶ-ಕಾಲವನ್ನು ಮೀರಿ ಯಾರಿಗಾದರೂ ಅನ್ವಯಿಸುತ್ತವೆ. "ಜಗದಿ ಸ್ವಾತಂತ್ರ್ಯವೇ ಲೇಸು" ಎಂಬುದು ಈ ತುಂಡು ಬಟ್ಟೆಯ ಕವಿಯ ಹಾರೈಕೆ!  ಇಂಥ ಬಹುವ್ಯಾಪಕ ಕವಿ-ಕಲ್ಪನೆಯ ಹಿನ್ನೆಲೆಯುಳ್ಳ ಕನ್ನಡ ಕವಿಗಳು .ಬ್ರಿಟಿಷ್ ಸರಕಾರದ ಸಾಮ್ರಾಜ್ಯಶಾಹೀ  ಇಕ್ಕಳದಲ್ಲಿ ಸಿಕ್ಕ ಅಡಿಕೆಯಂತಾಗಿದ್ದ  ಭಾರತದ

ಸ್ವಾತಂತ್ರ್ಯ ಸಂಗ್ರಾಮದ ಐತಿಹಾಸಿಕ ಘಟ್ಟದಲ್ಲಿ ಕೈ ಕಟ್ಟಿಕೊಂಡು ಕೂತಿರುವುದು ಸಾಧ್ಯವೆ? ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ನಡೆದಂತೆಯೇ, ಕನ್ನಡ ನಾಡಿನಲ್ಲೂ ನಮ್ಮ ಹಳ್ಳಿಗಳ ಜಾನಪದ ಕಲಾವಿದರು ಭಾರತಾಂಬೆಯ ಕೀರ್ತಿಯನ್ನು ಬಣ್ಣಿಸುವ ಲಾವಣಿಗಳನ್ನು
ರಚಿಸಿ ಹಾಡಿದರು.

ಉತ್ತರ ಭಾರತದ ಝಾಂಸಿ ಲಕ್ಷ್ಮಿಬಾಯಿಗಿಂತಲೂ ಮೊದಲೇ ಬ್ರಿಟಿಷರ ವಿರುದ್ಧ ಹೋರಾಡಿದ ಕಿತ್ತೂರ ರಾಣಿ ಚನ್ನಮ್ಮ ಹಾಗೂ ಅವಳ ಬಲಗೈ ಬಂಟನಾಗಿ ಹೋರಾಡಿದ ಸಂಗೊಳ್ಳಿ ರಾಯಣ್ಣನ ಕುರಿತು ಅನೇಕ ಲಾವಣಿಗಳು ಹುಟ್ಟಿ ಕರ್ನಾಟಕದ ಹಳ್ಳಿಹಳ್ಳಿಹಳ್ಳಿಯಲ್ಲೂ ಧುಮುಧುಮಿಸಿದವು. ಮಹಾತ್ಮಾ ಗಾಂಧಿ, ಸುಭಾಸ್ ಚಂದ್ರ ಭೋಸ್, ಝಾಂಸಿ ಲಕ್ಷ್ಮಿ ಬಾಯಿ , ತಾತ್ಯಾ ಟೋಪೆ, ನರಗುಂದ್ ಬಾಬಾಸಾಹೇಬ್, ಮುಂತಾದ ಧೀರ ಮುಂದಾಳುಗಳ ಬಗ್ಗೆ ಹಳ್ಳಿಗರಿಗಾಗಿ ಹಳ್ಳಿಗರ ಭಾಷೆಯಲ್ಲಿಯೇ ಹಲವೊಂದು ಲಾವಣಿ ಮತ್ತು ಗೀ=ಗೀ ಪದಗಳು ನಾಡಿನುದ್ದಕ್ಕೂ ಮಾರ್ದನಿಗೊಂಡವು. ಸ್ವಾತಂತ್ರ್ಯದ ವಿಷಯವಾಗಿ ಮಾತ್ರವಲ್ಲದೆ ಗಾಂಧೀಜಿಯವರ ವಿವಿಧ ವಿಧಾಯಕ ಕಾರ್ಯಕ್ರಮಗಳ( ಮದ್ಯಪಾನ ನಿಷೇಧ, ಸ್ವದೇಶಿ ಬಟ್ಟೆ, ಸಾಕ್ಷರತೆ, ಅಸ್ಪೃಶ್ಯತಾ ನಿವಾರಣೆ ಇತ್ಯಾದಿ) ಬಗೆಗೂ ಜಾನಪದ ಹಾಡುಗಳು ಅಸ್ತಿತ್ವದಲ್ಲಿ ಬಂದವು. ಗ್ರಾಮಾಂತರ ಜಾತ್ರೆ, ಉರುಸು, ಉತ್ಸವಗಳಲ್ಲಿ ಬೇರೆ ಬೇರೆ ಕ್ರಾಂತಿಕಾರೀ ನೇತಾರ ಮತ್ತು ಹೋರಾಟಗಾರರ ಬದುಕನ್ನು ಬಿಂಬಿಸುವ ನಾಟಕಗಳು ಪ್ರಮುಖ ಆಕರ್ಷಣೆಯೆನಿಸಿದವು. ಆಗೀಗ ಪೋಲೀಸರ ಲಾಠಿಯ ಪೆಟ್ಟಿಗೆ ತಲೆಗೊಡುವ ಪ್ರಸಂಗಗಳು ಬಂದರೂ, ಭಾರತೀಯ ಸಮಾಜದ ಕೆಳಪದರದಲ್ಲಿ ದೇಶದ ಬಿಡುಗಡೆಯ ಹೆಬ್ಬಯಕೆಗೆ ಕಾವೇರಿಸುವ ಕೆಲಸವನ್ನು ಜಾನಪದ ಕವಿ-ಕಲಾವಿದರು ಮಾಡಿದ್ದು ಬಲು ಅಭಿಮಾನದ ಸಂಗತಿಯೇ ಆಗಿದೆ.

* * *

ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಕನ್ನಡ ಜಾನಪದ ಕವಿ-ಕಲಾವಿದರು ದೇಶಸೇವಾವ್ರತ ತೊಟ್ಟಂತೆ ಕೈಕೊಂಡ ಜನಜಾಗೃತಿಯ ಒಂದು ಸಂಕ್ಷಿಪ್ತ ಚಿತ್ರವನ್ನು ನೋಡಿದ್ದಾಯಿತು. ಇನ್ನು ಓದು-ಬರಹ ಬಲ್ಲ ನಾಗರಿಕರಲ್ಲಿ ಸ್ವಾತಂತ್ರ್ಯದ ಅಗತ್ಯವನ್ನು ದೃಢೀಕರಿಸುವ ದೃಷ್ಟಿಯಿಂದ ಅಭಿಜಾತ ಕವಿಗಳು ಮಾಡಿದ ಸೇವೆಯನ್ನು ಅವಲೋಕಿಸುವ ಮೊದಲು, ಒಂದು ಮಹತ್ವದ ಸಂಗತಿಯನ್ನು ನಾವು ಗಮನಿಸಬೇಕೆಂದು ನನಗೆನಿಸುತ್ತದೆ:.

೧೮೫೭ರ ಸಿಪಾಯಿ ಬಂಡಾಯದ ಕಾಲದಿಂದ ನಮ್ಮ ಸ್ವಾತಂತ್ರ್ಯ ಆಂದೋಳನಕ್ಕೆ ಹೆಚ್ಚಿನ ಮಹತ್ವ ಬಂದದ್ದು ಐತಿಹಾಸಿಕ ಸಂಗತಿಯೇ ಆಗಿದೆ. ವಿವಿಧ ಮಜಲುಗಳಲ್ಲಿ ಹೋರಾಟಕ್ಕೆ ಹೊಸ ಬಲ ಬಂದದ್ದು ಮಾತ್ರ ದಕ್ಷಿಣ ಆಫ್ರಿಕಾದ ವರ್ಣವಿರೋಧೀ ಹೋರಾಟವನ್ನು ಮುಗಿಸಿ ಮಹಾತ್ಮಾ ಗಾಂಧೀಜಿಯವರು ಭಾರತಕ್ಕೆ ಬಂದು, ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಚುಕ್ಕಾಣಿ ಹಿಡಿದ ನಂತರ. ಅದು ೧೯೧೦-೨೦ರ ದಶಕದ ಕಾಲ. ಅದೇ ಕಾಲದಲ್ಲಿ ಕನ್ನಡ ಕಾವ್ಯದಲ್ಲಿ ನವೋದಯ ಪರ್ವವೊಂದು ಆರಂಭಗೊಂಡದ್ದು ಗಮನೀಯ ಸಂಗತಿಯಾಗಿದೆ. ಭಾರತದ ಬಿಡುಗಡೆಯ ಹಂಬಲಕ್ಕೆ ಕುದಿಯೇರುವ ಕಾಲದಲ್ಲಿಯೇ ಕನ್ನಡ ಕಾವ್ಯದಲ್ಲಿ ಸಾಮಾನ್ಯ ಜನಗಳನ್ನು ಸುಲಭವಾಗಿ ಮುಟ್ಟಬಲ್ಲ ಹೊಸಗನ್ನಡ ಭಾಷಾಶೈಲಿಯೊಂದು ಹದಗೊಳ್ಳುವ ಮುಹೂರ್ತ ಬಂದದ್ದು ಯೋಗಾಯೋಗವೇ ಅಲ್ಲವೇ? ಈ ನವೋದಯ ಕಾಲಕ್ಕೆ ಹಳಗನ್ನಡ-ನಡುಗನ್ನಡದ ನಡುಗಡ್ಡೆಗಳಿಂದ ಕನ್ನಡ ಕಾವ್ಯ ಜನಮಾನಸ-ಸರೋವರದ ಹತ್ತಿರ ಬರುವಂತಾಯಿತು. ಈ ಮಹಾಪರಿವರ್ತನೆಯ ಸಾರಥ್ಯ ವಹಿಸಿದವರು ಆಚಾರ್ಯ ಬಿ.ಎಮ್.ಶ್ರೀಯವರು.

ಅದೇ ಕಾಲಾವಧಿಯಲ್ಲಿ ಧಾರವಾಡದ ಕವಿವರ್ಯ ದ.ರಾ.ಬೇಂದ್ರೆಯವರೂ, ಮಂಗಳೂರಿನ ಪಂಜೆ ಮಂಗೇಶರಾಯರೂ, ಮಂಜೇಶ್ವರ ಗೋವಿಂದ ಪೈ ಅವರೂ ರಾಷ್ಟ್ರಾಭಿಮಾನದ ವಿಪುಲವಾದ ಪದ್ಯಗಳನ್ನು ಪ್ರಕಟಿಸಿದರು. ೧೯೨೦ರಲ್ಲಿ ಧಾರವಾಡಕ್ಕೆ ಮಹಾತ್ಮಾ ಗಾಂಧೀಜಿಯವರ ಭೇಟಿ, ಹಾಗು ಶ್ರೀ ರಂಗರಾವ್ ದಿವಾಕರ್, ಹುಕ್ಕೇರಿಕರ್, ಕರಮರಕರರಂಥ ಹಿರಿಯ ನೇತಾರರ ಪ್ರಭಾವದಿಂದಾಗಿ ವರಕವಿ ಬೇಂದ್ರೆಯವರು ಭಾರತದ ಸ್ಥಿತಿ-ಗತಿಗಳ ಕುರಿತು ಬಹುವಾಗಿ ಚಿಂತನೆಗೊಳಗಾದರು. ಭಾರತೀಯರ

ನಿಷ್ಕ್ರಿಯತೆಗಾಗಿ ರೊಚ್ಚಿಗೆದ್ದು, "**ಮಕ್ಕಳಿವರೇನಮ್ಮಾ ಮೂವತ್ತುಮೂರು ಕೋಟಿ?**" ಎಂದು ತಮ್ಮ ಒಳಗುದಿಯನ್ನು ಪ್ರಕಟಿಸಿದ ಬೇಂದ್ರೆಯವರು, 'ಮುಂದೆ "ನರಬಲಿ" ಎಂಬ ಬಲು ತೀಕ್ಷ್ಣ ಪ್ರತಿಕ್ರಿಯೆಯ ಕವನವನ್ನು ಬರೆದು ಬ್ರಿಟಿಶ್ ಸರಕಾರದ ಬಂಧನಕ್ಕೂ ಒಳಗಾದರು! ಒಬ್ಬ ಜನಪ್ರಿಯ ಹಿರಿಯ ಕವಿ ಸೆರೆಹಿಡಿಯಲ್ಪಟ್ಟಾಗ ಜನಮಾನಸದ ಮೇಲೆ ಎಂಥ ಘೋರ ಪರಿಣಾಮವಾಗಿರಲಿಕ್ಕಿಲ್ಲ!

ದ.ರಾ.ಬೇಂದ್ರೆಯವರಂತೆ ಕವಿಗಳಲ್ಲವಾದರೂ ಬಲು ದೊಡ್ಡ ಲಲಿತ ಗದ್ಯ ಲೇಖಕರೆಂದು ಹೆಸರಾದ ಶ್ರೀ ಗೋರೂರು ರಾಮಸ್ವಾಮಿ ಐಯಂಗಾರ ಅವರು ತಮ್ಮ ೧೭ನೆಯ ವಯಸ್ಸಿನಲ್ಲೇ ತಮ್ಮ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ಸೆರೆ ಹಿಡಿಯಲ್ಪಟ್ಟವರು. ಧಾರ್ವಾಡದ ಕವಿ ಸಾಲಿ ರಾಮಚಂದ್ರ ರಾಯರು, ಆನಂದಕಂದರು, ಮಂಗಳೂರಿನ ಬಿ.ಎಮ್.ಇದಿನಬ್ಬರು, ಗೋವಿಂದ ಪೈಗಳು-ಇವರೆಲ್ಲ ನೇರವಾಗಿ ಸ್ವಾತಂತ್ರ್ಯ ಸಂಗ್ರಾಮದ ಕಣಕ್ಕಿಳಿದು ವಿವಿಧ ಶಿಕ್ಷೆಗಳನ್ನು ಅನುಭವಿಸಿದವರೆ. ಕಯ್ಯಾರ್ ಕಿಯಂಣ್ ರೈಗಳು ಬರೆದ ಸ್ವಾತಂತ್ರ್ಯಪ್ರೇಮಗೀತೆಗಳ ಹಿಂದೆ ರಾಷ್ಟ್ರಾಭಿಮಾನದ ಲಾವಾರಸ ಕುದಿಯುವ ಹಾಗೆ ಭಾಸವಾಗುತ್ತದೆ. ಅವರು ತಮ್ಮ ಎತ್ತರದ ದನಿಯಲ್ಲಿ ತಮ್ಮ ಕವನಗಳನ್ನು ಓದಿದರೆ ಹಾಡಿದಂತೆಯೂ, ಹಾಡಿದರೆ ಸೊಗಸಾಗಿ ಓದಿದಂತೆಯೂ ನಮಗೆನಿಸುತ್ತದೆ. ರೈ ಅವರು ತಮ್ಮ ಕಾವ್ಯವಾಚನ ನಗಾರಿ ಬಾರಿಸಿದಂತೆ ಭಾಸವಾದರೆ, ಇದಿನಬ್ಬ ಅವರ ಕಾವ್ಯಗಾಯನ ತುತ್ತೂರಿ ಊದಿದಂತೆ ಭಾಸವಾಗುತ್ತದೆ! ಶ್ರೀ ಸು.ರಂ.ಎಕ್ಕುಂಡಿಯವರೂ ಅಷ್ಟೇ ನಯವಾಗಿ ಬ್ರಿಟಿಷರ ದಬ್ಬಾಳಿಕೆಯ ಪರಿಣಾಮವಾಗಿ "**ನಮ್ಮ ಜನಕೆ ಹೆಸರೇ ಇರಲಿಲ್ಲ/ ಉಸಿರೇ ಬರಲಿಲ್ಲ**" ಎಂದು ನೊಂದು ನುಡಿದರು. ಪ್ರೊ.ಎಮ್.ಗೋಪಾಲಕೃಷ್ಣ ಅಡಿಗರೂ ಮೊದಲು "**ಏಳುವುದೆಂದೀ ಜನಪದ? ಕ್ರಾಂತಿರೌದ್ರಕೆ ಬಹುದೆಂದಿಗೆ ಹದ?**" ಎಂದೂ, **'ನಾವೆಲ್ಲ ಒಂದೆ ಜಾತಿ, ಒಂದೆ ಮತ, ನಾವು ಭಾರತೀಯರು'** ಎಂದೂ ಹಾಡಿದ್ದು ಮಾತ್ರವಲ್ಲದೆ, "**ಕಟ್ಟುವೆವು ನಾವು ಹೊಸ ನಾಡೊಂದನು/ರಸದ ಬೀಡೊಂದನು**" ಎಂದು ಉತ್ಸಾಹದಿಂದ ಉಘ್ಘಡಿಸಿದವರು ಹೀಗೆ, ಭಾರತ ಸ್ವಾತಂತ್ರ್ಯದ ಚರಿತೆಯಂತೆ,ಹಲವು ಕನ್ನಡ ಕವಿಗಳ ಕಥೆಯೂ ಬಲು ರೋಚಕವಾಗಿದೆ. ಇರಲಿ.

ಹಳೆಯ ಮೈಸೂರು ಪ್ರದೇಶದ ಕವಿಗಳಲ್ಲಿ ರಾಷ್ಟ್ರಪ್ರೇಮದ ಬಗ್ಗೆ ಕವನಗಳನ್ನು ಬರೆದವರಲ್ಲಿ ಮಹಾಕವಿ ಕುವೆಂಪು ಅವರೇ ಪ್ರಮುಖರು. "**ನೂರು ದೇವರನೆಲ್ಲ ನೂಕಾಚೆ ದೂರ/ ಭಾರತಾಂಬೆಯೆ ದೇವಿ, ಪೂಜಿಸುವ ಬಾರ**" ಎಂದು ಇಡಿಯ ಭಾರತೀಯ ಸಮಾಜಕ್ಕೇ ಕರೆ ಕೊಟ್ಟವರು ಕುವೆಂಪು. "ಓ ನನ್ನ ಚೇತನ, ಆಗು ನೀ ಅನಿಕೇತನ!" ಎಂದು ಪ್ರತಿಯೊಬ್ಬ ವ್ಯಕ್ತಿಯ ಕ್ರಿಯಾಶೀಲ ಚೈತನ್ಯವು ವಿಶ್ವವ್ಯಾಪಿಯಾಗಿ ಬೆಳೆಯಬೇಕೆಂದು ಹಾರೈಸಿದ ಈ ಮಹಾಕವಿ ಭಾರತಾಂಬೆಯನ್ನು ದೇವಿಯ ಸ್ಥಾನಕ್ಕೆ ಏರಿಸಿ ಅವಳ ಬಗ್ಗೆ ಭಕ್ತಿ-ಗೌರವಗಳು ಮೂಡಿ, ಅವಳ ಬಿಡುಗಡೆಗಾಗಿ ಜನಮಾನಸವನ್ನು ಅಣಿಗೊಳಿಸುವ ಕಾರ್ಯವನ್ನು ಬಲು ಭಾವನಾತ್ಮಕವಾಗಿ ನಿರ್ವಹಿಸಿದ್ದಾರೆ. ನವಸಮಾಜನಿರ್ಮಾಣಕಾಗಿ "**ಗುಡಿ, ಚರ್ಚು, ಮಸ್ಜೀದೆಗಳ ಬಿಟ್ಟು ಬನ್ನಿ**" ಎಂದು "**ಮನುಜಮತ ವಿಶ್ವಪಥ**" ಹಿಡಿಯಲು ಅವರು ಜಾತ್ಯತೀತವಾದ ಧ್ವನಿಯಲ್ಲಿ ಅಹ್ವಾನಿಸುವುದು ಬಲು ಔಚಿತ್ಯಪೂರ್ಣವಾಗಿದೆ.! ಕುವೆಂಪು ಅವರಿಗಿಂತ ಬಲು ಹಿಂದೆಯೇ ಮದ್ರಾಸ ಸರಕಾರದಿಂದ 'ರಾಷ್ಟ್ರಕವಿ' ಎಂದು ಗೌರವಿಸಲ್ಪಟ್ಟ ಮಂಜೇಶ್ವರ ಗೋವಿಂದ ಪೈಗಳು ಭಾರತದ ಬಿಡುಗಡೆಯ ಬಗ್ಗೆ ಹಲವೊಂದು ಕವನಗಳನ್ನು ಬರೆದಿದ್ದಾರೆ. ಅವರ ಒಂದೊಂದು ನುಡಿಯೂ ಅವರ ರಾಷ್ಟ್ರೀಯತೆಯ ನಾಡಿಯ ಮಿಡಿತವನ್ನೇ ಹೊರಚಿಮ್ಮಿಸುವಂತಹದು. "ಭಾರತದಿಂದ ತೊಲಗಿರಿ" ಎಂಬುದು 'ಭಾರತ ಸ್ವಾತಂತ್ರ್ಯದ ಗಾಯತ್ರಿ'ಎಂದು ಪರಿಭಾವಿಸಿ ಅವರು ಬರೆದ ಸುನೀತ ಬಲು ಪ್ರಸಿದ್ಧವಾಗಿದೆ.
ಮಹಾತ್ಮಾ ಗಾಂಧೀಜಿಯವರು ೧೯೩೦ರಲ್ಲಿ ಕೈಕೊಂಡ ದಾಂಡೀ ಯಾತ್ರೆಯ ಸಂದರ್ಭದಲ್ಲಿ ಬಳಸಿದ **ಕೈಗೋಲು** ಕನ್ನಡ ಕವಿ ಗೋವಿಂದ ಪೈಗಳ ಕಾಣಿಕೆಯೆಂಬ ರಹಸ್ಯ ಬಹಳಷ್ಟು ಕನ್ನಡಿಗರಿಗೆ ಗೊತ್ತೇ ಇರಲಿಕ್ಕಿಲ್ಲ!!